44

# ಕಣಿವೆಯ ಅಡಿಯಲ್ಲಿ

# (17:14-27)

ಅಧ್ಯಾಯ 17 ವಿಸ್ತರಿಸುತ್ತಿರುವ ಹಾಗೆ ದೃಶ್ಯವು ಎತ್ತರವಾದ ಬೆಟ್ಟಗಳಿಂದ ಕೆಳಗೆ ತಗ್ಗಿನ ಪ್ರದೇಶಕ್ಕೆ ಬದಲಾಗುತ್ತದೆ; ಹಿಂದೆ ಉಳಿದುಕೊಂಡಿರುವ ಶಿಷ್ಯರಿಗೆ ಹುಡುಗನ ಮೈಯಲ್ಲಿರುವ ದೆವ್ವವನ್ನು ಬಿಡಿಸುವದಕ್ಕೆ ಆಗಲಿಲ್ಲ (17:14-21). ಅವರು ದೇವರ ಬಲದ ಮೇಲಲ್ಲ ಬದಲಾಗಿ ತಮ್ಮ ಸ್ವಂತ ಬಲದ ಮೇಲೆ ವಿಶ್ವಾಸವನ್ನು ಇಟ್ಟಿದ್ದರಿಂದ ಸಹಜವಾಗಿ ಅವರು ವಿಫಲರಾದರು. ಅವರಲ್ಲಿರುವ ನಂಬಿಕೆಯ ಕೊರತೆ ಅವರ ಸಂತಾನವನ್ನು ಪ್ರತಿನಿಧಿಸುತ್ತದೆ, ಮತ್ತು ದಂಡನೆಗಾಗಿ ಸಂಗತಿಯನ್ನು ಯೇಸುವಿನ ಮುಂದೆ ತರಲಾಯಿತು, ಇದಕ್ಕೆ ವಿರೋಧವಾಗಿ ಯೇಸು ತಕ್ಷಣದಲ್ಲಿ ಹುಡುಗನನ್ನು ಸ್ವಸ್ಥಪಡಿಸಿದನು.

ಯೇಸು ಇನ್ನೂ ಗಲಿಲಾಯದಲ್ಲಿರುವಾಗ, ಜನಸಮೂಹದಲ್ಲಿ ನಡೆದ ಈ ದೃಶ್ಯದ ಹಿಂದೆಯೇ, ಸಂಭವಿಸಲಿಕ್ಕಿರುವ ತನ್ನ ಮರಣದ ಕುರಿತು ಮಾತನಾಡಿದನು (17:22, 23). ಆತನು ಈ ಸಮಯ ಮತ್ತು ಸ್ಥಳವನ್ನು ಶಿಷ್ಯರನ್ನು ಅವರು ಎದುರಿಸಲ್ಲಿಕ್ಕಿರುವ ಭವಿಷ್ಯತ್ತಿಗಾಗಿ ಸಿದ್ಧಪಡಿಸಲು ಆಯ್ಕೆಮಾಡಿಕೊಂಡನು.

ಈ ಅಧ್ಯಾಯದ ಕೊನೆಯಲ್ಲಿ, ಅವರು ಕೆಪೆರ್ನೌಮಿನಲ್ಲಿರುವ ಸುಂಕ ಕಟ್ಟುವ ವಿಷಯದ ಕುರಿತು ಮಾತಾಡಿದರು (17:24-27). ದೇವರನ್ನು ಹಿಂದೆ ಇರುವಂತೆ, ಯೇಸು ಮತ್ತು ಆತನ ಶಿಷ್ಯರ ಅವಶ್ಯಕೆಗಳನ್ನು ಒದಗಿಸುವವನ್ನಾಗಿ ಚಿತ್ರಿಸಲಾಗಿದೆ.

## ದೆವ್ವ ಹಿಡಿದಿರುವ ಮಗನನ್ನು ಸ್ವಸ್ಥಮಾಡಿದ್ದು (17:14-21)

### ಯೇಸು ಹುಡುಗನಿಗೆ ಸ್ವಸ್ಥಮಾಡಿದ್ದು (17:14-18)

**[14]ಅವರು ಜನರ ಗುಂಪಿನ ಬಳಿಗೆ ಬಂದಾಗ ಒಬ್ಬನು ಆತನ ಹತ್ತರಕ್ಕೆ ಬಂದು ಆತನ ಮುಂದೆ ಮೊಣಕಾಲೂರಿ ವಂದಿಸಿ - [15]ಸ್ವಾಮೀ, ನನ್ನ ಮಗನನ್ನು ಕರುಣಿಸು; ಅವನು ಮೂರ್ಛಾರೋಗದಿಂದ ಬಹಳ ಕಷ್ಟಪಡುತ್ತಾನೆ; ಆಗಾಗ್ಗೆ ಬೆಂಕಿಯಲ್ಲಿಯೂ ಆಗಾಗ್ಗೆ ನೀರಿನಲ್ಲಿಯೂ ಬೀಳುತ್ತಿರುವನು. [16]ಅವನನ್ನು ನಿನ್ನ ಶಿಷ್ಯರ ಬಳಿಗೆ ಕರಕೊಂಡು ಬಂದಿದ್ದೆನು; ಆದರೆ ಅವನಿಗೆ ವಾಸಿಮಾಡುವದಕ್ಕೆ ಅವರಿಂದ ಆಗದೆಹೋಯಿತು ಅಂದನು. [17]ಅದಕ್ಕೆ ಯೇಸು - ಎಲಾ, ನಂಬಿಕೆಯಿಲ್ಲದಂಥ ಮೂರ್ಖ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ಇಲ್ಲಿ ನನ್ನ ಬಳಿಗೆ ತಕ್ಕೊಂಡು ಬನ್ನಿರಿ ಅಂದನು. [18]ಯೇಸು ಅವನನ್ನು ಗದರಿಸಲು ದೆವ್ವ ಅವನನ್ನು ಬಿಟ್ಟು ಹೋಯಿತು; ಆ ಕ್ಷಣವೇ ಆ ಹುಡುಗನಿಗೆ ಸ್ವಸ್ಥವಾಯಿತು.**

ದೃಶ್ಯವು ಬೆಟ್ಟದ ತುದಿಯಲ್ಲಿರುವ ಮಹತ್ತರ ಪ್ರಭಾವದಿಂದ ತಗ್ಗಿನಲ್ಲಿರುವ ಹತಾಶೆಗೆ ಬದಲಾಗುತ್ತದೆ. ಮಾರ್ಕನ ಸುವಾರ್ತೆ ಕೆಲವೊಂದು ಪೂರಕ ವಿವರಣೆಗಳನ್ನು ನೀಡುತ್ತದೆ ಇದರಿಂದಾಗಿ ಓದುಗನು ಆ ದೃಶ್ಯವನ್ನು ಸಂಪೂರ್ಣವಾಗಿ ಚಿತ್ರಿಸಿಕೊಳ್ಳಲು ಸಹಾಯವಾಗುತ್ತದೆ. ಯೇಸು ಮತ್ತು ಮೂರು ಜನ ಅಪೊಸ್ತಲರು ಬೆಟ್ಟದಿಂದ ಕೆಳಗೆ ಇಳಿದು ಬರುವಾಗ,

ಅವರು ಅಸ್ತವ್ಯಸ್ತವಾದ ಜನಸಮೂಹವನ್ನು ಎದುರಿಸಿದರು. ಹಿಂದಕ್ಕೆ ಉಳಿದಿದ್ದ ಒಂಭತ್ತು ಜನ ಅಪೊಸ್ತಲರು ಕ್ಷೋಭೆಯಲ್ಲಿದ್ದ ಜನಸಮೂಹದ ಮಧ್ಯದಲ್ಲಿದ್ದರು (ಮಾರ್ಕ 9:14-16), ಗಾಬರಿಯಲ್ಲಿರುವ ತಂದೆ ದೆವ್ವ ಪೀಡಿತನಾದ ತನ್ನ ಮಗನನ್ನು ಯೇಸು ಸ್ವಸ್ಥಪಡಿಸುತ್ತಾನೆ ಎಂಬ ನಂಬಿಕೆಯಿಂದ ಆತನ ಬಳಿಗೆ ತರಲು ಪ್ರಯತ್ನಿಸುತ್ತಿದ್ದನು. ಯೇಸು ಅಲ್ಲಿ ಇರದಿದ್ದರಿಂದ, ಮನುಷ್ಯನು ತನ್ನ ಮಗನನ್ನು ಸ್ವಸ್ಥಪಡಿಸಲು ಅಲ್ಲಿಂದ್ದಂತ ಶಿಷ್ಯರಿಗೆ ಒಪ್ಪಿಸಿದನು. ಬಹುಶಃ ಆತನು ಇಂಥಹಾ ಕಾರ್ಯಗಳಲ್ಲಿ ಅವರ ಜಯದ ಕುರಿತು ಕೇಳಿರಬಹುದು (ಮಾರ್ಕ 6:13). ಹಿಂದಿನ ಯಾವುದೇ ಫಲಿತಾಂಶವನ್ನು ಪರಿಗಣಿಸದೇ, ಈ ಬಾರಿ ಅಪೊಸ್ತಲರು ಹೀನಾಯವಾಗಿ ವಿಫಲರಾದರು.

ಒಂಭತ್ತು ಜನ ಅಪೊಸ್ತಲರನ್ನು ಜನಸಮೂಹ ಸುತ್ತುವರಿದಿತ್ತು, ಮತ್ತು ಶಾಸ್ತ್ರಿಗಳು ಅವರೊಂದಿಗೆ ತರ್ಕಮಾಡುತ್ತಿದ್ದರು (ಮಾರ್ಕ 9:14). ದೆವ್ವವನ್ನು ಬಿಡಿಸಲು ವಿಫಲರಾದ ಶಿಷ್ಯರನ್ನು ಗದರಿಸುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ. ತಕ್ಷಣದಲ್ಲಿ ಯೇಸುವಿನ ಆಗಮನದಿಂದಾಗಿ ಜನಸಮೂಹವು ಆಶ್ಚರ್ಯಚಕಿತವಾಯಿತು ಮತ್ತು ಅವರು ಓಡಿ ಆತನನ್ನು ಸುತ್ತುವರೆದರು (ಮಾರ್ಕ 9:15). ಅವರು ಯಾಕೆ ಆಶ್ಚರ್ಯಗೊಂಡರು? ಮೋಶೆಯು ಸಿನಾಯಿ ಬೆಟ್ಟದಿಂದ ಇಳಿದು ಬರುವಾಗ ಇದ್ದಂತೆ ಆತನು ಬೆಟ್ಟದ ಮೇಲೆ ಅನುಭವಿಸಿದ ಮಹತ್ತರವಾದ ಮಹಿಮೆ ಆತನೊಂದಿಗೆ ಇನ್ನೂ ಇತ್ತೋ (ವಿಮೋಚನಕಾಂಡ 34:33-35)? ಈ ಅಂಶವು ಚರ್ಚೆಗೆ ಒಳಪಟ್ಟಿರುವಾಗ, ಯೇಸು ಕೆಳಗೆ ಇಳಿದು ಬಂದಿರುವದಕ್ಕೂ ಮತ್ತು ಈ ಹಿಂದೆ ಮೋಶೆಗೆ ಆಗಿರುವದಕ್ಕೂ ಸಮಾನಾಂತರವಾದದ್ದು ಇವೆ. ಧರ್ಮಶಾಸ್ತ್ರವನ್ನು ನೀಡಿ ದಾತನು ಸಿನಾಯಿ ಬೆಟ್ಟದಿಂದ ಇಳಿದು ಬಂದನು, ಅಲ್ಲಿ ಆತನು ದೇವರ ಮಹಿಮೆಯಲ್ಲಿ ಪ್ರವೇಶಿಸಿದನು, ಅಲ್ಲಿಂದ ಕೆಳಗೆ ತಗ್ಗಿನಲ್ಲಿರುವ ಗಲಿಬಿಲಿಗೆ ಬಂದನು. ಒಂಭತ್ತು ಜನ ಶಿಷ್ಯರಂತೆ, ಮೋಶೆ ಮೇಲ್ವಿಚಾರಕರಾಗಿ ಬಿಟ್ಟು ಹೋದ (ಆರೋನ ಮತ್ತು ಹೂರನಿಗೆ) ತಮ್ಮ ನಂಬಿಕೆಯಲ್ಲಿ ಎಡವಿದರು (ವಿಮೋಚನಕಾಂಡ 24:12-18; 32:1-35).

**ವಚನಗಳು 14, 15.** ಆತನು ಆಗಮಿಸಿದಾಗ, ಯೇಸು ಶಾಸ್ತ್ರಿಗಳನ್ನು ಅವರು ತನ್ನ ಶಿಷ್ಯರೊಂದಿಗೆ ಏನನ್ನು ಚರ್ಚಿಸುತ್ತಿದ್ದಾರೆ ಎಂದು ಕೇಳಿದನು (ಮಾರ್ಕ 9:16). ಈ ಹಂತದಲ್ಲಿ ದೆವ್ವಹಿಡಿದಾತನ ತಂದೆ **ಬಂದು ಯೇಸುವಿನ** ಮುಂದೆ ಮೊಣಕಾಲೂರಿ ತನ್ನ ಮಗನನ್ನು ಕರುಣಿಸಬೇಕೆಂದು ಬೇಡಿಕೊಂಡನು. ಶಾಸ್ತ್ರಿಗಳಿಗೆ ಯೇಸು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸುವಂತೆ ಆ ಮನುಷ್ಯನು ನಿಜವಾಗಿಯು ಜನಸಮೂಹದೊಳಗಿಂದ ಕೂಗಿದನು (ಮಾರ್ಕ 9:17; ಲೂಕ 9:38). ಆತನು ಯೇಸುವನ್ನು, "ನಮ್ಮ ಮೇಲೆ ಕರುಣೆಯಿಟ್ಟು ನಮಗೆ ಸಹಾಯ ಮಾಡು ಎಂದು!" (ಮಾರ್ಕ 9:22) ಬೇಡಿಕೊಂಡನು.

ತಂದೆಯು ತನ್ನ ಮಗನ ಪರಿಸ್ಥಿತಿಯನ್ನು ಯೇಸುವಿಗೆ ವಿವರಿಸಿದನು. **ಅವನು ಮೂರ್ಛಾ ರೋಗದಿಂದ ಬಹಳ ಕಷ್ಟಪಡುತ್ತಾನೆ; ಆಗಾಗ್ಗೆ ಬೆಂಕಿಯಲ್ಲಿಯೂ ಆಗಾಗ್ಗೆ ನೀರಿನಲ್ಲಿಯೂ ಬೀಳುತ್ತಿರುವನು.** "ಹುಚ್ಚು ಹಿಡಿದವನಂತೆ" ("ಮೂರ್ಛಾ ರೋಗ")ಕ್ಕೆ ಗ್ರೀಕ್ ಶಬ್ದ (*selēniazomai*) "ಚಂದ್ರ" ಎನ್ನುವ ಶಬ್ದಕ್ಕೆ (*selēnē*) ಸಂಬಂಧಹೊಂದಿದೆ.[1] ಕೆಲವು ಪ್ರಾಚೀನ ಸಂಸ್ಕೃತಿಯಲ್ಲಿ ಮಾನಸಿಕ ಮತ್ತು ದೈಹಿಕ ಕಾಯಿಲೆಗಳು ಚಂದ್ರನ ಕೆಲವೊಂದು ಹಂತಗಳನ್ನು ಅವಲಂಭಿಸುತ್ತವೆ ಎಂದು ನಂಬುತ್ತಿದ್ದರು. ಕಿವುಡ ಮತ್ತು ಮೂಕನಷ್ಟೆ ಆಗಿರದೇ ಈ ಹುಡುಗನು ಮೂರ್ಛಾ ರೋಗಿ ಸಹ ಆಗಿದ್ದನು (ಮಾರ್ಕ 9:17, 18, 25; ಲೂಕ 9:39, 42). ಈ ಸೆಳೆತ ಅವನ ಜೀವಿತವನ್ನು ಅಪಾಯಕ್ಕೆ ಗುರಿಮಾಡಿತ್ತು; ಅದು ಆತನನ್ನು ಬೆಂಕಿಯಲ್ಲಿಯೂ ನೀರಿನಲ್ಲಿಯೂ ಬೀಳುವಂತೆ ಮಾಡುತಿತ್ತು (ಮಾರ್ಕ 9:18, 22). ಈ ಪರಸ್ಥಿತಿಯಿಂದಾಗಿ ಅವನಿಗೆ ಸಾಮಾನ್ಯ ಜೀವನ ನಡೆಸಲು ಅಸಾಧ್ಯವಾಗಿತ್ತು. ಅದೇ ಸಮಯದಲ್ಲಿ ಈ ಹುಡುಗನ ಸ್ಥಿತಿಯನ್ನು ಸ್ವಾಭಾವಿಕವಾದ ಕಾರಣಗಳೊಂದಿಗೆ ವಿವರಿಸಬಹುದಾಗಿತ್ತು. ಈ ಮೂಲಪಠ್ಯವು ಅವನು ದೆವ್ವದ ಬಂಧನದಲ್ಲಿದ್ದನು ಅದು

ಬಾಲ್ಯದಿಂದ ಅವನನ್ನು ಪೀಡಿಸುತಿತ್ತು ಎಂಬುದನ್ನು ಸ್ಪಷ್ಟವಾಗಿ ವಿವರಿಸುತ್ತದೆ (ಮಾರ್ಕ 9:21, 25).

**ವಚನ 16.** ಸ್ವಾಭಾವಿಕವಾಗಿ, ತಂದೆಯು **ಶಿಷ್ಯರು** ತನ್ನ ಮಗನಿಗೆ ಹಿಡಿದಿರುವ ದೆವ್ವವನ್ನು ಬಿಡಿಸಲು ಅಸಮರ್ಥರಾಗಿದ್ದರಿಂದ ಜಿಗುಪ್ಸೆಗೆ ಒಳಗಾಗಿದ್ದನು. ಅವನು ಅವನ್ನು ನಿನ್ನ ಶಿಷ್ಯರು ಎಂದು ಕರೆಯುತ್ತಾನೆ. ಅವರನ್ನು ತಾವು ಸಹ ದೆವ್ವಗಳನ್ನು ಬಿಡಿಸಲು ಸಮರ್ಥರಾಗಿದ್ದೇವೆ ಎಂದು ಹೇಳಿಕೊಳ್ಳುವ ತಮ್ಮ ಗುರುಗಳ (ರಬ್ಬಿ) ವಿದ್ಯಾರ್ಥಿಗಳಿಂದ ಪ್ರತ್ಯೇಕಿಸುತ್ತಾನೆ (ನೋಡಿರಿ 12:27ರ ಮೇಲಿನ ವ್ಯಾಖ್ಯಾನ). ಹುಡುಗನ ಗಂಭೀರ ಸ್ಥಿತಿ ತಂದೆಯನ್ನು ಇನ್ನೂ ಹೆಚ್ಚು ಹತಾಶನಾಗಿ ಮಾಡಿತ್ತು ಎಂಬುದು ತಿಳಿದುಬರುತ್ತದೆ.

ನಿಸ್ಸಂದೇಹವಾಗಿ, ಆತನು ಯೇಸುವಿನ ವಿಷಯದಲ್ಲಿ ಕೇಳಿದ ಸಂಗತಿಗಳಿಂದಾಗಿ, ಆತನು ಕರ್ತನು ತನ್ನ ಮಗನನ್ನು ಸ್ವಸ್ಥಪಡಿಸುತ್ತಾನೆ ಮತ್ತು ತನ್ನ ಕುಟುಂಬ ಸಾಮಾನ್ಯ ಜೀವಿತವನ್ನು ನಡೆಸಲು ಶಕ್ತವಾಗುವಂತೆ ಮಾಡುತ್ತಾನೆ ಎಂಬ ನಂಬಿಕೆಯಿಂದ ಬಂದಿದ್ದನು. ಆದರೆ ಈಗ ಶಿಷ್ಯರು ವಿಫಲರಾದದ್ದರಿಂದ ಯೇಸು ಸಹ ನನಗೆ ಸಹಾಯ ಮಾಡಲು ಶಕ್ತನಾಗಿರಲಿಕ್ಕಿಲ್ಲ ಎಂಬ ಭಯದಲ್ಲಿದ್ದನು. ಮಾರ್ಕನು ದಾಖಲಿಸಿರುವ ತಂದೆ ಮತ್ತು ಯೇಸುವಿನ ಮಧ್ಯದಲ್ಲಿರುವ ಸಂಭಾಷಣೆಯು ಈ ವಿಷಯವನ್ನು ಸೂಚಿಸುತ್ತದೆ. ತಂದೆಯು ಸಹಾಯಕ್ಕಾಗಿ ಯೇಸುವನ್ನು ಬೇಡಿಕೊಂಡು ಈ ರೀತಿಯಾಗಿ ಹೇಳುತ್ತಾನೆ, "ನಿನಗೆ ಸಾಧ್ಯವಿದ್ದಲ್ಲಿ ನಮ್ಮನ್ನು ಕರುಣಿಸಿ ನಮಗೆ ಸಹಾಯ ಮಾಡು!" ಯೇಸು "ನಂಬುವವರಿಗೆ ಎಲ್ಲಾ ಸಂಗತಿಗಳು ಸಾಧ್ಯ" ಎಂದು ಹೇಳುತ್ತಾನೆ" (ಮಾರ್ಕ 9:23). ತಂದೆಯು "ಕೂಡಲೆ ... ನಾನು ನಂಬುತ್ತೇನೆ ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು ಎಂದು ಕೂಗುತ್ತಾನೆ" (ಮಾರ್ಕ 9:24).

**ವಚನ 17. ಯೇಸು** ಉಪಯೋಗಿಸಿದ ಕಠಿಣವಾದ ಭಾಷೆ ನಿಸ್ಸಂದೇಹವಾಗಿ ತನ್ನ ಶಿಷ್ಯರನ್ನು ಒಳಗೊಂಡು ಇಡೀ ಸಮೂಹಕ್ಕಾಗಿ ಆಗಿತ್ತು. ಆತ್ಮದಲ್ಲಿ ವೇದನೆಯಿಂದಾಗಿ ಆತನು ಗಟ್ಟಿಯಾಗಿ ಕೂಗಿದನು. **ಎಲ್ಲಾ ನಂಬಿಕೆಯಿಲ್ಲದಂಥ ಮೂರ್ಖ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ಇಲ್ಲಿ ನನ್ನ ಬಳಿಗೆ ತಕ್ಕೊಂಡು ಬನ್ನಿರಿ ಅಂದನು.** ಅವರಲ್ಲಿರುವ ನಂಬಿಕೆಯ ಮತ್ತು ಆತ್ಮೀಕತೆಯ ಕೊರತೆ ಯೇಸುವಿಗೆ ಹೊತ್ತುಕೊಳ್ಳಲಾರದ ಭಾರವಾಗಿತ್ತು. "ನಂಬಿಕೆಯಿಲ್ಲದಂಥ ಮೂರ್ಖ ಸಂತಾನ" ಎಂಬ ವಾಕ್ಯಭಾಗವು ದಂಗೆ ಎದ್ದ ಇಸ್ರಾಯೇಲರನ್ನು ವರ್ಣಿಸಲು ಧರ್ಮೋಪದೇಶ 32:5, 20ರಲ್ಲಿ ಉಪಯೋಗಿಸಿದ ಭಾಷೆಯಂತೆ ಇದೆ (ನೋಡಿರಿ ಮತ್ತಾಯ 12:39; 16:4; ಅಪೊಸ್ತಲರ ಕೃತ್ಯಗಳು 2:40; ಫಿಲಿಪ್ಪಿ 2:15).

**ವಚನ 18.** ಮಾರ್ಕ ಮತ್ತು ಲೂಕ ಇಬ್ಬರೂ ಈ ರೀತಿಯಾಗಿ ಸೂಚಿಸುತ್ತಾರೆ. ಹುಡುಗನನ್ನು ಯೇಸುವಿನ ಬಳಿಗೆ ತರುವಾಗ ದೆವ್ವವು ಅವನಿಗೆ ಸೆಳೆತವನ್ನು ತಂದು ನೆಲಕ್ಕೆ ಅಪ್ಪಳಿಸಿ ಬಹಳವಾಗಿ ಒದ್ದಾಡಿಸಿತು (ಮಾರ್ಕ 9:26; ಲೂಕ 9:42). ಮತ್ತಾಯನ ಸುವಾರ್ತೆಯಲ್ಲಿ ಸರಳವಾಗಿ **ಯೇಸು ಅವನನ್ನು ಗದರಿಸಲು ದೆವ್ವ ಅವನನ್ನು ಬಿಟ್ಟು ಹೋಯಿತು; ಆ ಕ್ಷಣವೇ ಆ ಹುಡುಗನಿಗೆ ಸ್ವಸ್ಥವಾಯಿತು** ಎಂದು ಹೇಳುತ್ತಾನೆ. ಮಾರ್ಕನು, ಯೇಸುವಿನ ಆಜ್ಞೆಗೆ, ದೆವ್ವವು ತಕ್ಷಣ ಹುಡುಗನ ದೇಹದಿಂದ ಹೊರಗೆ ಬಂದಿತು ಮತ್ತು ಅವನು ಸತ್ತ ಹಾಗೆ ಬಿದಿದ್ದರಿಂದ ಬಹುಜನರು - ಸತ್ತುಹೋದ ಎಂದುಕೊಂಡರು (ಮಾರ್ಕ 9:26). ನಂತರ ಯೇಸು ಅವನನ್ನು ಕೈಹಿಡಿದು ಎಬ್ಬಿಸಿ, ಅವನ ತಂದೆಗೆ ಒಪ್ಪಿಸಿದನು (ಮಾರ್ಕ 9:27; ಲೂಕ 9:42). ಇದರ ಪರಿಣಾಮವಾಗಿ ಜನರು "ದೇವರ ಮಹತ್ತನ್ನು ನೋಡಿ ಬೆರಗಾದರು" (ಲೂಕ 9:43).

**ಶಿಷ್ಯರು ಸೋತು ಹೋಗಿದ್ದಕ್ಕಾಗಿ ಯೇಸುವಿನ ವಿವರಣೆ (17:19-21)**

**[19]ತರುವಾಯ ಶಿಷ್ಯರು ಏಕಾಂತವಾಗಿ ಯೇಸುವಿನ ಬಳಿಗೆ ಬಂದು - ಅದನ್ನು ಬಿಡಿಸಲಿಕ್ಕೆ ನಮ್ಮಿಂದ ಯಾಕೆ ಆಗಲಿಲ್ಲವೆಂದು ಕೇಳಲು ಆತನು ಅವರಿಗೆ - [20]ನಿಮ್ಮ ನಂಬಿಕೆ ಕಡಿಮೆಯಾಗಿರುವದರಿಂದಲೇ ಆಗಲಿಲ್ಲ; ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೇಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ - ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವದಿಲ್ಲ ಅಂದನು.**

**ವಚನ 19.** ದೆವ್ವವು ಹುಡುಗನನ್ನು ಬಿಟ್ಟುಹೋದ ನಂತರ, **ಶಿಷ್ಯರು ಏಕಾಂತವಾಗಿ ಯೇಸುವಿನ ಬಳಿಗೆ ಬಂದರು.** ಈ ಭಾಗದ ಸಂಗತಿ ಮನೆಯಲ್ಲಿ ನಡೆಯಿತು ಎಂದು ಮಾರ್ಕ 9:28ರಲ್ಲಿ ಪ್ರಕಟಿಸುತ್ತದೆ. ಶಿಷ್ಯರು ಕರ್ತನನ್ನು **ನಮ್ಮಿಂದ ಯಾಕೆ ಬಿಡಿಸಲು ಆಗಲಿಲ್ಲ?** ಎಂದು ಕೇಳಿದರು. ಗ್ರೀಕ್ ಭಾಷೆಯಲ್ಲಿ "ನಾವು" ಎನ್ನುವದು ಒತ್ತಿ ಹೇಳಲ್ಪಟ್ಟಿದೆ. ಅವರು ಯೇಸುವಿನಿಂದ ಅದ್ಭುತಗಳನ್ನು ಮಾಡುವಂತ ಶಕ್ತಿಯನ್ನು ಹೊಂದಿದ ಮೇಲೆ, ಸಹಜವಾಗಿ ಅವರು ಯಾವಾಗಲೂ ದೆವ್ವಗಳನ್ನು ಬಿಡಿಸುವದರಲ್ಲಿ ಯಶಸ್ವಿಯಾದರು (ಮಾರ್ಕ 6:7, 13).

**ವಚನ 20.** ಅವರ ಪ್ರಶ್ನೆಗೆ ಉತ್ತರವಾಗಿ, ಯೇಸು ಅವರಿಗೆ ಮೊದಲು **ಅವರಿಗೆ [ತಮ್ಮ] ಅಲ್ಪ ನಂಬಿಕೆಯಿಂದಾಗಿ** ದೆವ್ವವನ್ನು ಬಿಡಿಸಲಿಲ್ಲ. ಅವಶ್ಯಕತೆಯಿದ್ದದರಿಂದ ಅವರಲ್ಲಿರುವ ಅಲ್ಪ ನಂಬಿಕೆಗಾಗಿ ಯೇಸು ಅವರನ್ನು ಗದರಿಸಿದನು (6:30; 8:26; 14:31; 16:8). ಅವರಲ್ಲಿ **ಸಾಸಿವೆ ಕಾಳಿನಷ್ಟು ನಂಬಿಕೆ ಅವರಿಗಿದ್ದರೆ,** ಬೆಟ್ಟವನ್ನು ಕದಲಿಸಬಹುದು ಎಂದು ಸೇರಿಸಿದನು. ಪರ್ವತವು ತನ್ನ ಗಾತ್ರ ಮತ್ತು ಸ್ಥಿರತೆಗೆ ಜನಪ್ರಿಯವಾಗಿರುವಾಗ ಸಾಸಿವೆ ಕಾಳು ತನ್ನ ಚಿಕ್ಕ ಗಾತ್ರದಿಂದಾಗಿ ನಾಣ್ಣುಡಿಯಾಗಿದೆ (ನೋಡಿರಿ 13:31, 32ರ ಮೇಲಿನ ವ್ಯಾಖ್ಯಾನ). ತಿರುಗೊಮ್ಮೆ ಯೇಸುವಿನ ಉದಾಹರಣೆ ಸಣ್ಣ ವಸ್ತುವನ್ನು ದೊಡ್ಡ ವಸ್ತುವಿನೊಂದಿಗೆ ಹೋಲಿಸುವದರ ಮೂಲಕ ವ್ಯತ್ಯಾಸವನ್ನು ತೋರಿಸುವದಾಗಿದೆ (ನೋಡಿರಿ 7:3, 4; 19:24; 23:24).

ಯೇಸು ತನ್ನ ಶಿಷ್ಯರಿಗೆ ಬೆಟ್ಟವನ್ನು ಹೇಗೆ ಕದಲಿಸಬೇಕು ಎಂಬುದರ ಕುರಿತು ಪಾಠವನ್ನು ನೀಡುತ್ತಿರಲಿಲ್ಲ. ಆತನಾಗಲಿ ಆತನ ಶಿಷ್ಯರಾಗಲಿ ಇಂಥಹಾ ಒಂದು ಸಾಹಸಕ್ಕೆ ಕೈ ಹಾಕಿದ್ದರು ಎಂಬುದಕ್ಕೆ ಯಾವುದೇ ಸಾಕ್ಷಿ ಇಲ್ಲ. "ಬೆಟ್ಟವನ್ನು ಕದಲಿಸಬಹುದು" ಎಂದು ಹೇಳುವದು ವ್ಯಕ್ತಿ ದುಸ್ತರವಾದ ಕಾರ್ಯಗಳನ್ನು ಯಾವುದೇ ಅಡತಡೆಯಿಲ್ಲ ಮಾಡುವ ಸಾಮರ್ಥ್ಯವನ್ನು ವ್ಯಕ್ತಪಡಿಸುತ್ತದೆ (21:21; 1 ಕೊರಿಂಥ 13:2). William Barclay ರವರು ಹೀಗೆ ಬರೆದಿದ್ದಾರೆ,

> ಶ್ರೇಷ್ಟ ಬೋಧಕನು, ದೇವರ ವಾಕ್ಯವನ್ನು ನಿಜವಾಗಿ ವಿವರಿಸಿ ಅರ್ಥೈಸುತ್ತಾನೆ, ಮತ್ತು ವಿವರಿಸಿ ತೊಡಕುಗಳನ್ನು ಪರಿಹರಿಸುತ್ತಾನೆ, ಆತನು ಯಾವಾಗಲು ಬೆಟ್ಟಗಳನ್ನು ಬೇರುಸಹಿತ ಕೀಳುವವನು ಅಥವಾ ಪುಡಿಪುಡಿ ಮಾಡುವವನು ಎಂದು ಪ್ರಸಿದ್ಧಿಯಾಗುವನು. ಬೆಟ್ಟವನ್ನು ಹರಿದು ಹಾಕುವದು, ಬೇರು ಸಹಿತಕೀಳುವದು, ಪುಡಿಪುಡಿ ಮಾಡುವದು ಇವು ತೊಡಕುಗಳನ್ನು ತೆಗೆದುಹಾಕುವದಕ್ಕೆ ಉಪಯೋಗಿಸುವ ನಿತ್ಯದ ವಾಕ್ಯಭಾಗಗಳಾಗಿವೆ: ಯೇಸು ಇದನ್ನು ಬೌದ್ಧಿಕವಾಗಿ ಅಥವಾ ನೈಜವಾಗಿ ತೆಗೆದುಕೊಳ್ಳಬೇಕು ಎಂದು ಎಂದಿಗೂ ಅರ್ಥೈಸಿರಲಿಲ್ಲ ... ಆತನು ಉದ್ದೇಶಿಸಿದ್ದು, "ನಿಮ್ಮಲ್ಲಿ ಸಾಕಷ್ಟು ನಂಬಿಕೆ ಇದ್ದರೆ, ಎಲ್ಲಾ ತೊಂದರೆಗಳನ್ನು ಪರಿಹರಿಸಬಹುದು, ಅತ್ಯಂತ ಕಠಿಣವಾದ ಕಾರ್ಯವನ್ನು ಸಹ ಮಾಡಬಹುದು." ದೇವರಲ್ಲಿ ನಂಬಿಕೆ

ಮನುಷ್ಯನಿಗೆ ತನ್ನ ಮಾರ್ಗದಲ್ಲಿ ಬರುವ ಬೆಟ್ಟದಂತೆ ತೊಂದರೆಯನ್ನು ತೆಗೆದುಹಾಕಲು ಸಮರ್ಥರನ್ನಾಗಿಸುವ ಸಾಧನವಾಗಿದೆ.[2]

ಪಠ್ಯದ ಅರ್ಥವು ಯೇಸುವಿನ ಮರುಭರವಸೆಯ **ನಿನಗೆ ಅಸಾಧ್ಯವಾದದ್ದು ಒಂದು ಇಲ್ಲ** ಎಂಬ ವಾಕ್ಯದಿಂದ ಬೆಂಬಲಿಸಲ್ಪಟ್ಟಿದೆ. ಬಹುಶಃ ಶಿಷ್ಯರು ತಮ್ಮ ಸಾಮರ್ಥ್ಯದ ಮೇಲೆ ಆತುಕೊಂಡಿದ್ದರು, ತಮಗಿರುವ ಸಾಮರ್ಥ್ಯವು ದೇವರಿಂದ ಬಂದದ್ದು ಎಂಬುದನ್ನು ಮರೆತು ಬಿಟ್ಟಿದ್ದರು.

**ವಚನ 21.** ಅವರ ವಿಫಲತೆಗೆ ಯೇಸು ನೀಡಿದ ಎರಡನೆ ವಿವರಣೆ, ನಿರ್ದಿಷ್ಟವಾದ ದೆವ್ವವನ್ನು ಬಿಡಿಸುವದು ಕಷ್ಟ ಅದಕ್ಕೆ ಬಹಳ **ಉಪವಾಸ ಮತ್ತು ಪ್ರಾರ್ಥನೆಯ** ಅಗತ್ಯತೆಯಿದೆ. ಬೇರೆ ಬೇರೆ ವಿಧದ ದೆವ್ವಗಳಿವೆ ಮತ್ತು ವಿವಿಧ ಹಂತದ ಬಲದ ಅವಶ್ಯಕತೆಯಿದೆ ಎಂದು ಭಾಷೆಯು ಸೂಚಿಸುತ್ತದೆ.

21ನೇ ವಚನವು ಪ್ರಾಚೀನ ಹಸ್ತಪ್ರತಿಗಳಲ್ಲಿ ಕಣ್ಮರೆಯಾಗಿರುವದರಿಂದ ಪಠ್ಯದಲ್ಲಿ ಸೇರಿಸಬೇಕೋ ಬೇಡವೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. NASB ಅನುವಾದದಲ್ಲಿ ಈ ವಚನವನ್ನು ಉಪಯೋಗಿಸುತ್ತದೆ ಆದರೆ ಅದನ್ನು ಆವರಣ ಚಿಹ್ನೆಯಲ್ಲಿ ಇಡುತ್ತದೆ. Bruce M. Metzger ರವರು ವಾಕ್ಯದ ನಕಲು ಮಾಡುವವರು ವಚನವನ್ನು ಮಾರ್ಕ 9:29ರಿಂದ ತೆಗೆದುಕೊಂಡು ಸೇರಿಸಿದ್ದಾರೆ ಎಂದು ಒಪ್ಪಿಕೊಳ್ಳುತ್ತಾರೆ. ಪಠ್ಯದಲ್ಲಿ ಯೇಸು, "ಈ ಜಾತಿಯು ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆ ಯಾವುದರಿಂದಲೂ ಬಿಟ್ಟು ಹೋಗುವದಿಲ್ಲ ಎಂದನು." ಆದರೂ ಮಾರ್ಕನು ಕೆಲವು ಪ್ರಾಚೀನ ಹಸ್ತಪ್ರತಿಗಳು "ಉಪವಾಸ" ಎಂಬ ಪದವನ್ನು ಸೇರಿಸುತ್ತವೆ (ನೋಡಿರಿ KJV).[3]

## ಯೇಸು ತನ್ನ ಮರಣ ಹತ್ತಿರವಾಯಿತು ಎಂದು ಎರಡನೆ ಸಾರಿ ಹೇಳಿದ್ದು (17:22, 23)

**22ಅವರು ಗಲಿಲಾಯಾದಲ್ಲಿ ಗುಂಪುಗುಂಪಾಗಿ ಕೂಡುತ್ತಿರುವಾಗ ಯೇಸು ಅವರಿಗೆ - ಮನುಷ್ಯ ಕುಮಾರನು ಮನುಷ್ಯರ ಕೈಗೆ ಒಪ್ಪಿಸಿಕೊಡಲ್ಪಡುವನು. 23ಅವರು ಆತನನ್ನು ಕೊಲ್ಲುವರು; ಸತ್ತ ಮೂರನೆಯ ದಿನದಲ್ಲಿ ಆತನು ಜೀವಿತನಾಗಿ ಎಬ್ಬಿಸಲ್ಪಡುವನು ಎಂದು ಹೇಳಿದನು. ಅದನ್ನು ಕೇಳಿ ಅವರು ಬಹಳ ದುಃಖಪಟ್ಟರು.**

**ವಚನಗಳು 22, 23. ಯೇಸು** ಕಡಿಮೆ ಸಮಯವನ್ನು ಜನಸಮಾಹದೊಂದಿಗೆ ಕಳೆದನು ಮತ್ತು ಭೂಲೋಕದ ತನ್ನ ಉಳಿದ ಜೀವಿತದಲ್ಲಿ ಹೆಚ್ಚಿನ ಸಮಯವನ್ನು ಶಿಷ್ಯರೊಂದಿಗೆ ಕಳೆದನು. ಈ ಸಮಯದಲ್ಲಿ, ಆತನು ಮೇಲಿಂದ ಮೇಲೆ ಅವರಿಗೆ ಸಮೀಪಿಸುತ್ತಿರುವ ತನ್ನ ಮರಣದ ಕುರಿತಾಗಿ ಹೇಳಿದನು. ಈ ವಚನಗಳು ಆತನು ಎರಡನೆಯ ಸಾರಿ ತನ್ನ ಮರಣದ ಕುರಿತು ಸ್ಪಷ್ಟವಾಗಿ ಹೇಳಿದನು ಎಂಬುದನ್ನು ತಿಳಿಸುತ್ತದೆ (ನೋಡಿರಿ 16:21ರ ಮೇಲಿನ ವ್ಯಾಖ್ಯಾನ).

ಶ್ರಮೆಯ ಈ ಮುನ್ಸೂಚನೆ ಮೊದಲು ಹೇಳಿರುವದಕ್ಕಿಂತ ಹೆಚ್ಚು ವೇದನೆಯಿಂದ ಕೂಡಿತ್ತು, ಯೇಸುವಿನ ಮರಣದ ಸ್ಥಳವನ್ನು ಬಿಟ್ಟುಬಿಡಲಾಗಿದೆ - ಆತನ ಶ್ರಮೆ ಮತ್ತು ಮರಣಕ್ಕೆ ಜವಾಬ್ದಾರರಾಗಿರುವವರನ್ನು ಪಟ್ಟಿ ಮಾಡಿಲ್ಲ. **ಮನುಷ್ಯರ ಕೈಗೆ ಒಪ್ಪಿಸಿಕೊಡಲ್ಪಡುವನು** ಎಂದು ಹೇಳುವದರ ಮೂಲಕ ಹೊಸ ವಿವರಣೆಯನ್ನು ಒದಗಿಸುತ್ತಾನೆ. ಕರ್ತನು ಬಹಳಮಟ್ಟಿಗೆ ಯೂದನು ತನ್ನನ್ನು ಹಿಡಿದುಕೊಡುವದರ ಕುರಿತು ಮಾತನಾಡುತ್ತಿರಬಹುದು, ಆತನು ಅಪೊಸ್ತಲನನ್ನು ಹೆಸರಿಡಿದು[4] ಸಂಭೋದಿಸದಿದ್ದರೂ ಅವನು ಮೊದಲನೆಯದಾಗಿ ಯೆಹೂದಿ ನಾಯಕರ ಕೈಯೊಳಗಿಂದ ಬಿಡುಗಡೆ ಹೊಂದಬೇಕಾಗುತ್ತು. ಅವರು ಯೂದನೊಂದಿಗೆ

ಸಮಾಲೋಚನೆ ಮಾಡಿ ಆತನನ್ನು ಹಿಡಿದುಕೊಡಲು ಪ್ರೇರೇಪಿಸಿದ್ದರು (26:47, 48). ಗೆತ್ಸೆಮನೆ ತೋಟದಲ್ಲಿ[5] ಯೇಸುವನ್ನು ತಮ್ಮ ಅಧೀನದಲ್ಲಿ ತೆಗೆದುಕೊಳ್ಳುವ ದೇವಾಲಯದ ಕಾವಲುಗಾರರು, ಸನ್ಹೆಡ್ರೀನ್ ನಿಯಂತ್ರಣದಲ್ಲಿದ್ದರು ("ಮಹಾಯಾಜಕನ ಅಧಿಕಾರಿಗಳು"; ಯೋಹಾನ 18:3) ಆತನನ್ನು ಒಂದು ವಿಚಾರಣೆಯ ನಂತರ ಇನ್ನೊಂದು ವಿಚಾರಣೆಗೆ ಗುರಿಮಾಡಿದವರು, ಹಿಂಸೆಯನ್ನು ನೀಡಿದವರು, ದೂಷಿಸಿದವರು ಯೆಹೂದ್ಯರಾಗಿದ್ದರು (26:57-68; ಯೋಹಾನ 18:12-14), ನಂತರ ಆತನನ್ನು ಪಿಲಾತನಿಗೆ ಒಪ್ಪಿಸಿದರು ಮತ್ತು ಆತನನ್ನು ಕ್ರೂಜೆಗೆ ಹಾಕಬೇಕು ಎಂದು ಒತ್ತಾಯಪಡಿಸಿದರು (27:1, 2, 19-23).

ಯೇಸು ತಾನು **ಮೂರನೆಯ ದಿನದಂದು ಎದ್ದು ಬರುವೆನೆಂದು ಪ್ರವಾದನೆಯನ್ನು** ಹೇಳಿದನು (ನೋಡಿರಿ 16:21ರ ಮೇಲಿನ ವ್ಯಾಖ್ಯಾನ). ಇದು ಆತನು ಕ್ರೂಜಿತನಾದ ಮೇಲೆ ಮೂರನೇ ದಿನದಲ್ಲಿ ಸತ್ತವರೊಳಗಿಂದ ಎದ್ದು ಬಂದಾಗ ನೆರವೇರಿತು. ಯೇಸು ಶುಕ್ರವಾರದಂದು ಕ್ರೂಜೆಗೆ ಹಾಕಲ್ಪಟ್ಟನು ಮತ್ತು ಆತನನ್ನು ಸಾಯಂಕಾಲ 6 ಗಂಟೆಗೆ ಪೂರ್ವದಲ್ಲಿಯೇ ಕ್ರೂಜೆಯಿಂದ ಇಳಿಸಿದರು, ಯಾಕೆಂದರೆ ಆತನನ್ನು ಬೇಗನೇ ಸಬ್ಬತ್ ಪ್ರಾರಂಭವಾಗುವದರೊಳಗಾಗಿ ಹೂಣಿಡಬೇಕೆಂದು ಹೀಗೆ ಮಾಡಿದರು (27:57-61; ಮಾರ್ಕ 15:42-47; ಲೂಕ 23:50-55; ಯೋಹಾನ 19:31-42). ಆತನ ದೇಹವು ಸಬ್ಬತ್ ದಿನದಲ್ಲಿ ಸಂಪೂರ್ಣ ಸಮಾದಿಯಲ್ಲಿತ್ತು (27:62-66; ಲೂಕ 23:56). ಆತನು ವಾರದ ಮೊದಲನೆ ದಿವಸ ಬೆಳಗಿನ ಜಾವದಲ್ಲಿ ಸಮಾಧಿಯಿಂದ ಎದ್ದನು (28:1-7; ಮಾರ್ಕ 16:1-8; ಲೂಕ 24:1-7; ಯೋಹಾನ 20:1-9).

ಅಪೊಸ್ತಲರು ಯೇಸುವಿನ ಪ್ರವಾದನೆಯನ್ನು ಅರ್ಥಮಾಡಿಕೊಳ್ಳಲಿಲ್ಲ. ವಿಶೇಷವಾಗಿ ಆತನ ಪುನರುತ್ಥಾನಕ್ಕೆ ಸಂಬಂಧಿಸಿದ ಭಾಗವು (ಮಾರ್ಕ 9:32). ಅವರು ಆತನು ಹೇಳಿದ ಪ್ರವಾದನೆಯಲ್ಲಿ ಮನುಷ್ಯರಿಂದ ಆತನನ್ನು **ಕೊಲ್ಲಲ್ಪಡುವರು** ಎಂಬುದರ ಮೇಲೆ ಕೇಂದ್ರಿಕರಿಸಿದ್ದರು, ಮತ್ತು ಅದು ಅವರಿಗೆ **ಬಹಳ ದುಃಖವನ್ನು** ಉಂಟು ಮಾಡಿತು.

## ತೆರಿಗೆ ಪಾವತಿಸುವದು (17:24-27)

**24ಅವರು ಕಪೆರ್ನೌಮಿಗೆ ಬಂದಾಗ ದೇವಾಲಯಕ್ಕಾಗಿ ತೆರಿಗೆಯನ್ನು ಎತ್ತುವವರು ಪೇತ್ರನ ಬಳಿಗೆ ಬಂದು - ನಿಮ್ಮ ಬೋಧಕನು ದೇವಾಲಯದ ತೆರಿಗೆಯನ್ನು ಸಲ್ಲಿಸುವದಿಲ್ಲವೇ ಎಂದು ಕೇಳಲು - ಹೌದು, ಸಲ್ಲಿಸುವನು ಅಂದನು. 25ಪೇತ್ರನು ಮನೆಯೊಳಕ್ಕೆ ಬಂದಾಗ ಯೇಸು ಅವನಿಗಿಂತ ಮೊದಲೇ - ಸೀಮೋನಾ, ನಿನಗೆ ಹೇಗೆ ತೋರುತ್ತದೆ? ಭೂಲೋಕದ ಅರಸರು ಸುಂಕವನ್ನಾಗಲಿ ಮಂಡೇತೆರಿಗೆಯನ್ನಾಗಲಿ ಯಾರಿಂದ ತೆಗೆದುಕೊಳ್ಳುತ್ತಾರೆ? ತಮ್ಮ ಮಕ್ಕಳಿಂದಲೋ? ಬೇರೆಯವರಿಂದಲೋ ಎಂದು ಕೇಳಿದನು. 26ಅವನು - ಬೇರೆಯವರಿಂದ ಎಂದು ಉತ್ತರಕೊಡಲು ಯೇಸು ಅವನಿಗೆ - ಹಾಗಾದರೆ ಮಕ್ಕಳು ಅದಕ್ಕೆ ಒಳಗಾದವರಲ್ಲವಲ್ಲಾ. 27ಆದರೂ ನಮ್ಮ ವಿಷಯವಾಗಿ ಅವರು ಬೇಸರಗೊಳ್ಳಬಾರದು; ನೀನು ಸಮುದ್ರಕ್ಕೆ ಹೋಗಿ ಗಾಳಾ ಹಾಕಿ ಮೊದಲು ಸಿಕ್ಕುವ ಮೀನನ್ನು ಎತ್ತು; ಅದರ ಬಾಯಿ ತೆರೆದು ನೋಡಿದರೆ ಅದರಲ್ಲಿ ಒಂದು ರೂಪಾಯಿ ಸಿಕ್ಕುವದು; ಅದನ್ನು ತೆಗೆದುಕೊಂಡು ನಮ್ಮಿಬ್ಬರದಂತ ಹೇಳಿ ಅವರಿಗೆ ಕೊಡು ಎಂದು ಹೇಳಿದನು.**

**ವಚನ 24.** ಕೈಸರೆಯ ಫಿಲಿಪ್ಪಿಗೆ ಪ್ರಯಾಣ ಮಾಡಿದ ನಂತರ (16:13) ಮತ್ತು ರೂಪಾಂತರ ಹೊಂದಿದ ಬೆಟ್ಟದಲ್ಲಿದ್ದ ನಂತರ (17:1), ಯೇಸು ಮತ್ತು ಅಪೊಸ್ತಲರು ಗಲಿಲಾಯಕ್ಕೆ ಹಿಂತಿರುಗಿದರು (17:22) ಮತ್ತು ಅವರು **ಕಪೆರ್ನೌಮಿಗೆ** ಬಂದರು. ಇದು ಯೆರೂಸಲೇಮಿಗೆ ಹೋಗಿ ಮರಣಕ್ಕೆ ಹೊಂದುವ ಪೂರ್ವದಲ್ಲಿ - ಆತನ ಸೇವೆಗೆ ಮೂಲವಾ

ಗಿರುವ ಪಟ್ಟಣಕ್ಕೆ ಕರ್ತನ ಕೊನೆಯ ಭೇಟಿಯಾಗಿತ್ತು (ನೋಡಿರಿ 19:1; 21:1).

ಎರಡು ಕ್ರಮಾ[6]ದೇವಾಲಯದ ತೆರಿಗೆಯಾಗಿತ್ತು. ಇದು ಕಡ್ಡಾಯವಾಗಿತ್ತು. ಧರ್ಮಶಾಸ್ತ್ರದ ಪ್ರಕಾರ (half-shekel) ತೆರಿಗೆ ಅವಶ್ಯವಾಗಿತ್ತು ಇದನ್ನು ಪರ್ಣಶಾಲೆಗಳ ವ್ಯವಸ್ಥೆಗಾಗಿ ಉಪಯೋಗಿಸಲಾಗುತಿತ್ತು (ವಿಮೋಚನಕಾಂಡ 30:11-16). ಈ ತೆರಿಗೆಯು ವಾರ್ಷಿಕ ತೆರಿಗೆಯಾಗಿತ್ತೊ ಇಲ್ಲವೋ ಎಂಬುದು ಚರ್ಚೆಯ ಪ್ರಶ್ನೆಯಾಗಿತ್ತು. ಆಚರಣೆಯಲ್ಲಿ, ಇದು ತಾತ್ಕಾಲಿಕವಾದದ್ದಾಗಿ ಕಂಡುಬರುತಿತ್ತು. ಹಾಗಿದ್ದರೂ, ಅವಶ್ಯವಿದ್ದಲ್ಲಿ ತೆರಿಗೆಯನ್ನು ನವೀಕರಿಸಲಾಗುತಿತ್ತು (2 ಪೂರ್ವಕಾಲವೃತ್ತಾಂತ 24:6, 9; ನೆಹಮೀಯಾ 10:32).[7] ಕ್ರಿಸ್ತನ ಸಮಯದೊಳಗೆ, ತೆರಿಗೆಯನ್ನು ಇಪ್ಪತ್ತು ವರ್ಷ ಪ್ರಾಯದ ಮತ್ತು ಅವರಿಗಿಂತ ದೊಡ್ಡ ಗಂಡಸರಿಂದ ಪ್ರತಿವರ್ಷ ಸಂಗ್ರಹಿಸುತ್ತಿದ್ದರು.

ಯೆರೂಸಲೇಮಿನ ದೇವಾಲಯದ ಅಧಿಕಾರಿಗಳು **ತೆರಿಗೆಯನ್ನು ಸಂಗ್ರಹಿಸುತ್ತಿದ್ದರು.** ಆದಾರ್ ತಿಂಗಳಿನಲ್ಲಿ, ಪಸ್ಕ ಹಬ್ಬದ ಮುಂಚೆ (Nisan ತಿಂಗಳಲ್ಲಿ), ಅವರನ್ನು ಇಸ್ರಾಯೇಲ್ ದೇಶದುದ್ದಕ್ಕೂ ತೆರಿಗೆ ವಸೂಲಿಗಾಗಿ ಕಳುಹಿಸುತ್ತಿದ್ದರು. ತೆರಿಗೆಯನ್ನು ಹೊರಗೆ ವಾಸಿಸುವ ನಿರಾಶ್ರಿತರಿಂದ ಸಹ ಸಂಗ್ರಹಿಸುತ್ತಿದ್ದರು.[8] ಕ್ರಿ.ಶ 70ರಲ್ಲಿ ದೇವಾಲಯ ನಾಶವಾದ ನಂತರ ಈ Vespasianನು ಈ ಸಂಗ್ರಹ ಮಾಡಿದ ತೆರಿಗೆಯನ್ನು ರೋಮನಲ್ಲಿರುವ Jupiter Capitolinus[9] ದೇವಾಲಯಕ್ಕೆ ಉಪಯೋಗಿಸಬೇಕೆಂದು ಹೇಳಿದನು. ದೇಶಭಕ್ತಿಯ ಪ್ರತೀಕಕ್ಕೆ ಬದಲಾಗಿ, ಯೆಹೂದ್ಯರು ರೋಮನ್ನರಲ್ಲಿ ಅಧೀನರಾಗಿರುವದರ ಪ್ರತೀಕವಾಯಿತು.

ದೃಶ್ಯದಲ್ಲಿ ತಿರುಗೊಂದಾವರ್ತಿ **ಪೇತ್ರನು** ಮುಖ್ಯ ಭೂಮಿಯನ್ನು ನಿರ್ವಹಿಸುತ್ತಾನೆ (ನೋಡಿರಿ 14:28-32; 15:15; 16:16-19, 22, 23; 17:4). ತೆರಿಗೆ ಸಂಗ್ರಹಕಾರರು ಆತನಿಗೆ, **ನಿಮ್ಮ ಬೋಧಕನು ತೆರಿಗೆಯನ್ನು ಕೊಡುವದಿಲ್ಲವೋ?** ಈ ಪ್ರಶ್ನೆಯ ಗ್ರೀಕ್ ರಚನೆ, ನಕಾರಾತ್ಮಕ ಅಣುವನ್ನು ಉಪಯೋಗಿಸುತ್ತದೆ ಅದು ದೃಢಸೂಚಕ ಉತ್ತರವನ್ನು ನಿರೀಕ್ಷಿಸುತ್ತದೆ. Leon Morris ತೆರಿಗೆ ಸಂಗ್ರಹಿಸುವವರು ಪೇತ್ರನಿಗೆ ತೆರಿಗೆ ಕೊಡುವದು ಬಾಕಿಯಿದೆ[10] ಎಂದು ಸೂಕ್ಷ್ಮವಾಗಿ ಜ್ಞಾಪಿಸಿದರು ಎಂದು ಯೋಚಿಸುತ್ತಾರೆ. ಇದಕ್ಕೆ ಭಿನ್ನ ವಾಗಿ, Michael J. Wilkins ರವರು ಈ ಪ್ರಶ್ನೆಯು ಪೇತ್ರನನ್ನು (ಮತ್ತು ಯೇಸುವನ್ನು) ಸಿಕ್ಕಿಸಲು ಮುಸುಕು ಧರಿಸಿ ಕೇಳಿದ ಪ್ರಶ್ನೆಯಾಗಿದೆ. ಎಲ್ಲದರ ನಂತರ, ಯೆಹೂದ್ಯರು ಯಾರು ತೆರಿಗೆಯನ್ನು ನೀಡಲು ಅರ್ಹರು ಎಂಬುದನ್ನು ಚರ್ಚೆಮಾಡಿದರು.[11] ಈ ಅಧಿಕಾರಿಗಳು ಯೇಸು ದೇವಾಲಯಕ್ಕೆ ಪ್ರಾಮಾಣಿಕನಾಗಿಲ್ಲ ಎಂಬುದನ್ನು ಸಿದ್ಧಾಂತ ಪಡಿಸಲು ಪ್ರಯತ್ನಿಸುತ್ತಿರಬಹುದು.[12]

**ವಚನ 25.** ಯೇಸು ದೇವಾಲಯದ ತೆರಿಗೆಯನ್ನು ಕಟ್ಟುವದರ ಕುರಿತು ಕೇಳಿದಾಗ, ಪೇತ್ರನು **ಹೌದು** ಕೊಡುತ್ತಾನೆ ಎಂದು ಉತ್ತರಿಸಿದನು. ಪೇತ್ರನು ಯೇಸುವಿನೊಂದಿಗೆ ಮೂರು ವರ್ಷಗಳ ಕಾಲ ಇದ್ದದರಿಂದ ಅವನು ಯೇಸು ಹಿಂದಿನ ಸಂದರ್ಭದಲ್ಲಿ ವಾರ್ಷಿಕ ತೆರಿಗೆಯನ್ನು ನೀಡುವದನ್ನು ನೋಡಿರಬಹುದು.

ಪೇತ್ರನು **ಮನೆಯನ್ನು ಪ್ರವೇಶಿಸಿದಾಗ, ಯೇಸು ಮೊದಲು ಮಾತಾಡಿದನು**; ಪೇತ್ರನಿಗೆ ಅವಕಾಶ ದೊರೆಯುವ ಪೂರ್ವದಲ್ಲಿ ಆತನು ಮಾತನಾಡಲು ಪ್ರಾರಂಭಿಸಿದನು. ಬಹುಶಃ ಕರ್ತನು ಅವರ ಸಂಭಾಷಣೆಯನ್ನು ಕೇಳಿಸಿಕೊಂಡಿರಬಹುದು ಅಥವಾ ಆತನಿಗೆ ಅದ್ಭುತವಾದ ಜ್ಞಾನವಿರಬಹುದು (ನೋಡಿರಿ 9:4; 12:25). ಯೇಸು ಪ್ರಶ್ನೆಯೊಂದಿಗೆ ಪ್ರಾರಂಭಿಸಿದನು. **"ಸೀಮೋನಾ, ನಿನಗೆ ಹೇಗೆ ತೋರುತ್ತದೆ?"** ಆತನು ಸಾಮಾನ್ಯವಾಗಿ ಇಂಥಹಾ ಪ್ರಶ್ನೆಗಳನ್ನು ವಿಷಯದ ಕುರಿತು ಯೋಚಿಸಲು ತನ್ನ ಶೋತ್ರಗಳನ್ನು ಉತ್ತೇಜಿಸುವದಕ್ಕಾಗಿ ಕೇಳುತ್ತಿದ್ದನು (18:12; 21:28; 22:42). ಆತನು ಮುಂದುವರಿಸಿ, **ಭೂಲೋಕದ ಅರಸರು ಸುಂಕವನ್ನಾಗಲಿ ಮಂಡೇತೆರಿಗೆಯನ್ನಾಗಲಿ ಯಾರಿಂದ ತೆಗೆದುಕೊಳ್ಳುತ್ತಾರೆ? ತಮ್ಮ ಮಕ್ಕಳಿಂದಲೋ? ಬೇರೆಯವರಿಂದಲೋ ಎಂದು ಕೇಳಿದನು.** ಈ ಹೋಲಿಕೆ "ಭೂಲೋಕದ ಅರಸರ" ಅಥವಾ

ವಿಗ್ರಹ ಆರಾಧಕರ ಅರಸರ ಆಚರಣೆಯನ್ನು ಅವಲಂಭಿಸಿದೆ (1 ಅರಸುಗಳು 4:34; ಕೀರ್ತನೆ 2:2). ಬೇರೆ ಬೇರೆ ತೆರಿಗೆಗಳನ್ನು ಉಲ್ಲೇಖಿಸಲಾಗಿದೆ "ಸುಂಕ" (*telos*) ವಸ್ತುಗಳ ಮೇಲೆ ಹಾಕುವ ತೆರಿಗೆಯನ್ನು ಉಲ್ಲೇಖಿಸುತ್ತವೆ (9:9) ಅದೇ ಸಮಯದಲ್ಲಿ "ತಲೆ-ತೆರಿಗೆ" (*kēnsos*) ಜನಸಂಖ್ಯೆಯ ಆಧಾರದ ಮೇಲೆ ಸಲ್ಲಿಸುವ ಕಪ್ಪಾಕಾಣಿಕೆ (22:17). ಇದು ಲ್ಯಾಟೀನ್ ಪದ *census*ದಿಂದ ತೆಗೆದುಕೊಳ್ಳಲಾಗಿದೆ.

**ವಚನ 26. ಪೇತ್ರನು ಬೇರೆಯವರಿಂದ ಎಂದು ಉತ್ತರಕೊಟ್ಟನು, ಅದಕ್ಕೆ ಯೇಸು ಅವನಿಗೆ, ಹಾಗಾದರೆ ಮಕ್ಕಳು ಅದಕ್ಕೆ ಒಳಗಾದವರಲ್ಲವಲ್ಲಾ ಅಂದನು.** ಅರಸನ ಸ್ವಂತ ಪ್ರಜೆಗಳಿಗೆ ಆತನ ರಾಜ್ಯದಲ್ಲಿ ತೆರಿಗೆವಿನಾಯಿತಿ ಇರುತ್ತದೆ. ಯೇಸು ದೇವರ ಮಗನಾಗಿದ್ದದರಿಂದ (16:16; 17:5) ಮತ್ತು ದೇವಾಲಯವು ಆತನ "ತಂದೆಯ ಮನೆಯಾಗಿದೆ" (ಲೂಕ 2:49; ಯೋಹಾನ 2:16; ನೋಡಿರಿ 12:6), ಅವನು ದೇವಾಲಯದ ತೆರಿಗೆಯನ್ನು ನೀಡುವದರಿಂದ ವಿನಾಯಿತಿಯನ್ನು ಹೊಂದಿರಬಹುದು. ಹ್ಯಾಗೂ, ದೇವರು ತನ್ನ ಮಗನಿಗೆ ತೆರಿಗೆಯನ್ನು ಹಾಕಬಹುದು, ತನ್ನ ಕುಟುಂಬದಲ್ಲಿ ಮಕ್ಕಳನ್ನಾಗಿ ಸ್ವೀಕರಿಸಿದವರಿಗೂ, ಸಹ ತೆರಿಗೆಯನ್ನು ಹಾಕಲಾರನು, ಅವರು ಯೇಸುವಿನ ಶಿಷ್ಯರಾಗಿದ್ದರು.

**ವಚನ 27.** ಯೇಸು ತಾವು ತೆರಿಗೆಯನ್ನು ತುಂಬುತ್ತೇವೆ ಎಂದು ಸಲಹೆ ನೀಡಿದನು, ದೇವಾಲಯದ ಅಧಿಕಾರಿಗಳನ್ನು **ಬೇಸರಗೊಳ್ಳಬಾರದೆಂದು** ಆತನು ತನ್ನ ಶಿಷ್ಯರಿಗೆ ಜನರನ್ನು ಸುಮ್ಮಸುಮ್ಮನೆ ಬೇಸರಗೊಳಿಸಬಾರದು ಎಂದು ಸಲಹೆ ನೀಡಿದನು (18:5-7), ಕೆಲವು ಸಾರಿ ಯೇಸು - ನಂಬಿಕೆಯ ವಿಷಯದಲ್ಲಿ - ಇತರರನ್ನು ಬೇಸರಗೊಳಿಸುವದು ಅವಶ್ಯ ಎಂದು ಪರಿಗಣಿಸಿದನು (13:57; 15:12-14).

ಈ ತೆರಿಗೆಯನ್ನು ನೀಡಲು ಹಣ ಅಸಾಮಾನ್ಯವಾದ ರೀತಿಯಲ್ಲಿ ಹೊಂದಿಕೊಂಡನು. ಕರ್ತನು ಪೇತ್ರನಿಗೆ **ನೀನು ಸಮುದ್ರಕ್ಕೆ ಹೋಗಿ ಗಾಳಾ ಹಾಕು** ಎಂದು ಹೇಳಿದನು. ವಿವಿಧ ರೀತಿಯ ಬಲೆಯಿಂದ ಗಲಿಲಾಯ ಸಮುದ್ರದಲ್ಲಿ ಮೀನು ಹಿಡಿಯುವ ಅನೇಕ ಸನ್ನಿವೇಶಗಳನ್ನು ಸುವಾರ್ತೆಯು ಉಲ್ಲೇಖಿಸುತ್ತದೆ. ಗಾಳಾ ಎಂಬ ಪದವನ್ನು ಉಲ್ಲೇಖಿಸಿರುವದು ಇಲ್ಲಿ ಮಾತ್ರ ಪೇತ್ರನು ಮೊದಲು **ಮೀನಿನ ಬಾಯಿ ತೆರೆದು** ನೋಡಬೇಕಿತ್ತು. ಮತ್ತು ಅಲ್ಲಿ ಆತನಿಗೆ ದೊರೆತ **ಒಂದು ರೂಪಾಯಿಯಿಂದ** ತನ್ನ ಮತ್ತು ಕರ್ತನ ತೆರಿಗೆಯನ್ನು ಕೊಡಬೇಕಾಗಿತ್ತು.[13]

"Shekel," ಎಂದರೆ "ಒಂದು ರೂಪಾಯಿ" ಸ್ಪಷ್ಟವಾಗಿ ಅದನ್ನು (*statēr*) ಎಂದು, ಇದು ಬೆಳ್ಳಿ ತೂಕ ಔನ್ಸಿನಲ್ಲಿ 1/16 ಭಾಗ ಇಂಥಹ ನಾಲ್ಕು ಭಾಗಕ್ಕೆ ಸಮವಾಗಿರುತ್ತದೆ.[14] ಅಲ್ಲಿ ಎರಡು ಭಾಗದಷ್ಟು ತೆರಿಗೆ ಕಟ್ಟಿದರೆ ಸಾಕಾಗಿತ್ತು (half-shekel) ಅದು ಇಬ್ಬರಿಗಾಗಿ ಕಟ್ಟಬೇಕಿತ್ತು. ಯೇಸುವಿನ ಕಾಲದಲ್ಲಿ ಬಹಳ ವಿರಳವಾಗಿ ಉಪಯೋಗಿಸುವ ನಾಣ್ಯ ಇದಾಗಿತ್ತು. ಇದನ್ನು ಇಬ್ಬರಿಗಾಗಿ ತೆರಿಗೆ ಕೊಡುವಾಗ ಈ ನಾಣ್ಯವನ್ನು ತೆರಿಗೆಗಾಗಿ ಅಥವಾ *statēr* ಗಾಗಿ ಕೊಡುತ್ತಿದ್ದರು.[15]

ಕರ್ತನು ಅದ್ಭುತಗಳು ಹಲವು ವಿಶಿಷ್ಟ ಅಂಶಗಳನ್ನು ಹೊಂದಿವೆ. ಇದು ದಾಖಲಿಸಲ್ಪಟ್ಟ ಒಂದೇ ಒಂದು ಅದ್ಭುತವಾಗಿದೆ. (1) ಹಣವನ್ನು ಒಳಗೊಂಡಿದೆ, (2) ಆತನಿಗಾಗಿ ವೈಯಕ್ತಿಕ ಲಾಭವೇನು ಇಲ್ಲ, (3) ಒಂದೇ ಒಂದು ಮೀನನ್ನು ಒಳಗೊಂಡಿದೆ, ಮತ್ತು (4) ಅದರ ಫಲಿತಾಂಶಗಳು ದಾಖಲಿಸಲ್ಪಟ್ಟಿಲ್ಲ, ಉದಾಹರಣೆಗೆ ನಿಜವಾಗಿ ಮೀನನ್ನು ಹಿಡಿದಿರುವದು. ಫಲಿತಾಂಶಗಳು ದಾಖಲಿಸದೇ ಹೋದಾಗ್ಯೂ, ಅದ್ಭುತವು ಖಂಡಿತವಾಗಿ ನಡೆದಿದೆ, ಯೇಸು ಹೇಳಿದ ಮೇಲೆ ಅದು ನಡೆದಿರಲೇಬೇಕು.

ಈ ಅದ್ಭುತ ತನ್ನ ಮಕ್ಕಳಿಗೆ ದೇವರು ಒದಗಿಸುವಿಕೆ ಒತ್ತು ನೀಡುತ್ತದೆ. ಒಣಗಿಹೋದ ಅಂಜೂರದ ಮರದಂತೆ (21:19), ಈ ಅದ್ಭುತವು ಮೂಲ ಸತ್ಯದ ಕುರಿತು "ಸೂಚಕ" ವನ್ನು ನೀಡುತ್ತದೆ.[16] ಆ ಸತ್ಯ ಇದಾಗಿದೆ: ದೇವರು ತನ್ನ ಸ್ವಂತ ಜನರಿಗೆ ಒದಗಿಸುತ್ತಾನೆ. Craig S. Keener ರವರು ಈ ರೀತಿಯಲ್ಲಿ ಹೇಳುತ್ತಾರೆ: "ಅರಸನ ಮಕ್ಕಳು ತೆರಿಗೆಯನ್ನು ನೀಡಬಹುದು,

ಯಾಕೆಂದರೆ ಇದನ್ನು ನೀಡುವದಕ್ಕೆ ಅರಸನು ಅವರಿಗೆ ಹಣವನ್ನು ಒದಗಿಸುತ್ತಾನೆ."[17]

## ಪಾಠಗಳು

## ಸಾಸಿವೆ ಕಾಳಿನ ಸೂತ್ರ (17:20)

ನಾವು ಬಲವಾದ ಸಂಗತಿಗಳ ಕುರಿತು ಯೋಚಿಸುವಾಗ, ನಾವು ಅನೇಕಾವರ್ತಿ ದೊಡ್ಡ ಸಂಗತಿಗಳ ಕುರಿತು ಯೋಚಿಸುತ್ತೇವೆ. ಆದರೆ ಯೇಸು ತನ್ನ ಶಿಷ್ಯರೊಂದಿಗೆ ಸಣ್ಣ ವಸ್ತುವಿನ ಬಲದ ಕುರಿತು ಮಾತನಾಡುತ್ತಾನೆ. ಯೇಸುವಿನ ಮಾತಿನಲ್ಲಿ, ಅದು ಅತ್ಯಂತ ಚಿಕ್ಕ ಬೀಜವಾಗಿದ್ದರೂ, ಸಾಸಿವೆ ಕಾಳಿಗೆ ಬಲ ಮತ್ತು ಸಾಮರ್ಥ್ಯವಿದೆ (13:31, 32; ಲೂಕ 17:6). ಈ ಚಿಕ್ಕ ಬೀಜ ತನ್ನ ಉದ್ದೇಶವನ್ನು ನೇರವೇರಿಸಬೇಕಾದರೆ, ಅದನ್ನು ಮೊದಲು ನೆಡಬೇಕು.

17:20ರಲ್ಲಿ ನಮ್ಮ ಕರ್ತನು ಸಂಕ್ಷಿಪ್ತವಾದ ಹೇಳಿಕೆಯಲ್ಲಿ ನಾವು ಸಾಸಿವೆ ಕಾಳಿನ ಕೆಲವು ತತ್ವಗಳನ್ನು ತಿಳಿದುಕೊಳ್ಳುತ್ತೇವೆ. ಈ ತತ್ವಗಳನ್ನು ಆಚರಣೆಯಲ್ಲಿ ತರಲು ನಂಬಿಕೆ ಅವಶ್ಯವಾಗಿದೆ. ಈ ತತ್ವಗಳನ್ನು ಆಚರಣೆಯಲ್ಲಿ ತರಲು ನಂಬಿಕೆ ಅವಶ್ಯವಾಗಿದೆ (17:14-21). ಅವುಗಳಲ್ಲಿ ಕೆಲವನ್ನು ಪರೀಕ್ಷಿಸೋಣ.

1. ಅದು ಹೆಚ್ಚಿನದನ್ನು ಮಾಡಲು ನಮ್ಮಿಂದ ಸ್ವಲ್ಪಮಾತ್ರ ತೆಗೆದುಕೊಳ್ಳುತ್ತದೆ.

2. ಉತ್ತಮವಾದ ಸುಗ್ಗಿಯನ್ನು ಹೊಂದಲು, ನಾವು ನಮ್ಮ ಸಿದ್ಧತೆಯಲ್ಲಿ ಮತ್ತು ನೆಡದ ನಮ್ಮ ಆಚರಣೆಯಲ್ಲಿ ಸ್ಥಿರವಾಗಿರಬೇಕು.

3. ನಾವು ದೇವರ ವಾಕ್ಯವನ್ನು ಕಲಿಯುವದ ಮತ್ತು ಬೋಧಿಸುವದರ ಮೂಲಕ, ಪ್ರಾರ್ಥಿಸುವದು, ಇತರರಿಗೆ ಸುವಾರ್ತೆಯನ್ನು ಹಂಚುವದು, ನಮ್ಮಲ್ಲಿರುವದನ್ನು ಮತ್ತು ನಮ್ಮನ್ನು ಕೊಡುವದು, ಅವಶ್ಯಕತೆಯಿರುವವರಿಗೆ ಸಹಾಯ ಮಾಡುವದು, ನಮಗೆ ದೊರೆತ ಆಶೀರ್ವಾದಗಳಿಗಾಗಿ ಕೃತಜ್ಞರಾಗಿರುವದರ ಮೂಲಕ "ಸಾಸಿವೆ ಕಾಳನ್ನು" ಬಿತ್ತುತ್ತೇವೆ.

4. ನಮ್ಮ ಸಾಸಿವೆ ಕಾಳನ್ನು ಬಿತ್ತುವದು ಕೇವಲ ಯೋಚಿಸುವದಲ್ಲ ಮಾತನಾಡುವದನ್ನು ಒಳಗೊಂಡಿದೆ. ಅದು ಕೇವಲ ಮಾತನಾಡುವದಲ್ಲ ಮಾಡುವದನ್ನು ಒಳಗೊಂಡಿದೆ. ಪರಿಸ್ಥಿತಿಗಳು ಅನುಕೂಲವಾಗಿರುವಾಗ ಬಿತ್ತುವದು ಅವಶ್ಯವಾಗಿದೆ.

---

ಟಿಪ್ಪಣಿಗಳು

[1]ಆಂಗ್ಲ ಭಾಷೆಯ ಪದ "lunatic" ಎನ್ನುವದು ಲ್ಯಾಟೀನ್ ಭಾಷೆಯ *lunaticus,* ಶಬ್ದದಿಂದ ತೆಗೆದುಕೊಳ್ಳಲಾಗಿದೆ, ಇದು ಲ್ಯಾಟೀನ ಭಾಷೆಯ "moon" *(luna)* ಸಂಬಂಧಪಟ್ಟದ್ದಾಗಿದೆ. [2]William Barclay, *The Gospel of Matthew,* vol. 2, 2d ed., The Daily Study Bible (Philadelphia: Westminster Press, 1958), 184–85. ನೋಡಿರಿ Talmud *Sanhedrin* 24a; *Baba Bathra* 3b; *Berakoth* 64a. [3]Bruce M. Metzger, *A Textual Commentary on the Greek New Testament*, 2d ed. (Stuttgart: German Bible Society, 1994), 35, 85. [4]ಗ್ರೀಕ್ ಭಾಷೆಯ "ಬಿಡುಗಡೆ" *(paradidōmi)* ಅನೇಕ ಸಾರಿ ಸುವಾರ್ತೆಯಲ್ಲಿ ಯೂದನ ನಂಬಿಕೆ ದ್ರೋಹದ ವಿಷಯ ಉಪಯೋಗಿಸಲಾಗಿದೆ. ಆದರೂ, ಈ ಪದವು ಬೇರೆ ಬೇರೆ ಪಠ್ಯದಲ್ಲಿ ದೇವರು ತನ್ನ ಪರಮಾಧಿಕಾರ ಉಪಯೋಗಿಸಿ ತನ್ನ ಮಗನನ್ನು ಶ್ರಮೆ ಹೊಂದಿ ಮರಣಹೊಂದಲು ಅವಕಾಶಮಾಡಿಕೊಟ್ಟನು (ಯೆಶಾಯ 53:6, 12 [LXX]; ರೋಮಾಪುರ 4:25; 8:32). [5]ಈ ಯೆಹೂದ್ಯ ಅಧಿಕಾರಿಗಳು ರೋಮನ್ ಸೈನ್ಯಧಿಕಾರಿಗಳೊಂದಿಗೆ ಯೇಸುವನ್ನು ಬಂದಿಸಲು ಸಹಕರಿಸಿದರು (ಯೋಹಾನ 18:3, 12). [6]ಕ್ರಿ.ಶ. ಮೊದಲನೆಯ ಶತಮಾನದಲ್ಲಿ ಎರಡು ಡೆಕ್ರಮಾ ನಾಣ್ಯ (didrachma) ಅರ್ಧ ಶೆಕೆಲಿನಗೆ ಸಮಾನವಾದದ್ದಾಗಿತ್ತು (Josephus *Antiquities* 3.8.2.) [7]Mishnah *Shekalim* 2.4. [8]Ibid., 1.1, 3; Josephus *Antiquities* 16.2.3; 16.6.2–5; 18.9.1. [9]Josephus *Wars* 7.6.6; Dio Cassius *Roman History* 65.7.2; Suetonius *Lives of the Caesars: Domitian* 12.2. [10]Leon Morris, *The Gospel*

*According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 452.

[11]Mishnah ಪ್ರಕಾರ, ಲೇವಿಗಳು, ಇಸ್ರಾಯೇಲರು, ಮತಾಂತರ ಹೊಂದಿದವರು, ಮತ್ತು ಸ್ವತಂತ್ರ ಗುಲಾಮರು ತೆರಿಗೆ ಕೊಡಲು ಬದ್ದರಾಗಿದ್ದಾರೆ. ಹೆಂಗಸರು, ಗುಲಾಮರು, ಚಿಕ್ಕವರು, ಅವರಿಗೆ ಕೊಡಲೇ ಬೆಕೆಂಬ ನಿರ್ಬಂದವಿಲ್ಲ, ಆದರೆ ಅವರ ಹಣವು ಸ್ವೀಕರಿಸಲಾಗುವದು. ಒಂದು ಪ್ರಶ್ನೆ ಹಾಗೆಯೇ ಉಳಿಯುತ್ತದೆ ಯಾಜಕರು ತೆರಿಗೆ ಕೊಡಬೇಕೋ ಅಥವಾ ಇಲ್ಲವೋ ಎನ್ನುವದು. ಸಮಾರ್ಯದವರಿಂದ ಮತ್ತು ಅನ್ಯರಿಂದ ಹಣವನ್ನು ಸ್ವಿಕರಿಸುವದಿಲ್ಲ. (Mishnah *Shekalim* 1.3–5.) ಸತ್ತ ಸಮುದ್ರದ ಸುರಳಿ ಪ್ರಕಾರ, Qumran ಜನಾಂಗ ಜೀವನದಲ್ಲಿ ಒಂದೇ ಸಾರಿ ದೇವಾಲಯ ತೆರಿಗೆ ಕೊಡುತ್ತಿದ್ದರು ವಾರ್ಷಿಕ ತೆರಿಗೆ ಕೊಡುತ್ತಿರಲಿಲ್ಲ ಎಂದು ತಿಳಿಸಲಾಗಿದೆ. (*Ordinances on Biblical Laws.*) [12]Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew, Mark, Luke,* ed. Clinton E. Arnold (Grand Rapids, Mich.: Zondervan, 2002), 110. [13]ಮೀನಿನ ಒಳಗಡೆ ಬೆಲೆಯುಳ್ಳ ವಸ್ತುಗಳು ಇರುತ್ತವೆ ಎಂದು ಇತರ ಉದಾಹರಣೆಗಳಲ್ಲಿ ಕಂಡುಕೊಳ್ಳುತ್ತೇವೆ ಅದರಲ್ಲಿ ಮುದ್ರೆ ಉಂಗುರ ಮತ್ತು ಬೆಲೆಯುಳ್ಳ ಕಲ್ಲು - ಹಳೆ ಕಾಲದ ಸಾಹಿತ್ಯ ಸಹ ಕಂಡುಕೊಂಡಿದ್ದಾರೆ. (Herodotus 3.41, 42; Talmud *Shabbath* 119a.) [14]Josephus *Antiquities* 3.8.2. [15]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 271–72. [16]ನೋಡಿರಿ Donald A. Hagner, *Matthew 14—28,* Word Biblical Commentary, vol. 33B (Dallas: Word Books, 1995), 512. [17]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 446.